ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : (300)142
ಸದಸ್ಯರ ಹೆಸರು : ಶ್ರೀ ಹ್ಯಾರಿಸ್ ಎನ್.ಎ. (ಶಾಂತಿನಗರ)
ಉತ್ತರಿಸುವ ಸಚಿವರು : (ಶ್ರೀ ಜೆ.ಕರುಣಾಕರ ರೆಡ್ಡಿ) ಕಂದಾಯ ಸಚಿವರು

ಅ ಬೆಂಗಳೂರು ಮಹಾನಗರ ವ್ಯಾಪ್ತಿಯಲ್ಲಿರುವ ಒಟ್ಟು ಉಪ ನೋಂದಣಿ ಕಛೇರಿಗಳೆಷ್ಟು; ಒಂದು ವರ್ಷದ ಅವಧಿಯಲ್ಲಿ ಎಷ್ಟು ಸಲ ಅವುಗಳನ್ನು ವಿಭಜಿಸಿ ಆರಂಭಿಸಲಾಗಿದೆ;

ಬೆಂಗಳೂರು ನಗರ ಜಿಲ್ಲೆ ವ್ಯಾಪ್ತಿಯಲ್ಲಿ ಒಟ್ಟು **43** ಉಪ ನೋಂದಣಿ ಕಛೇರಿಗಳಿರುತ್ತವೆ.

ಬೆಂಗಳೂರು ನಗರ ಜಿಲ್ಲೆಯಲ್ಲಿ ಉಪ ನೋಂದಣಿ ಕಛೇರಿಗಳನ್ನು ಒಂದು ವರ್ಷದ ಅವಧಿಯಲ್ಲಿ ಎರಡು ಸಲ ವಿಭಜಿಸಲಾಗಿದೆ.

ಆ ಸಾರ್ವಜನಿಕರಿಗೆ ಉತ್ತಮ ನೋಂದಣಿ ಹಾಗೂ ಆಡಳಿತದ ಹಿತದೃಷ್ಟಿಯಿಂದ ಜಾರಿಗೊಳಿಸುತ್ತಿರುವ ನೋಂದಣಿ ವ್ಯವಸ್ಥೆಯಲ್ಲಿ ಮಹತ್ವದ ಸುಧಾರಣೆಗಳು ಯಾವುವು?

ನೋಂದಣಿ ಮತ್ತು ಮುದ್ರಾಂಕ ಇಲಾಖೆಯಲ್ಲಿ ನೋಂದಣಿ ಕ್ರಿಯೆಯನ್ನು ಗಣಕೀಕರಣದ ಮುಖಾಂತರ ಬಿಒಟಿ ಆಧಾರದ ಮೇಲೆ ಜಾರಿಗೊಳಿಸಲಾಗಿದ್ದು ನೋಂದಣಿಯಾದ ದಸ್ತಾವೇಜುಗಳನ್ನು **30** ನಿಮಿಷದ ಒಳಗಾಗಿ ಸಾರ್ವಜನಿಕರಿಗೆ ನೀಡಲಾಗುತ್ತಿದೆ ಮತ್ತು ಗಣಕೀಕರಣದ ಮುಖಾಂತರ ಇನ್ನೂ ಅನೇಕ ಸುಧಾರಣೆಗಳನ್ನು ತರುವ ಪ್ರಕ್ರಿಯೆ ನಡೆಯುತ್ತಿದೆ.

ವಿಷಯ: ಕೈಗಾರಿಕೆಗಳ ಸ್ಥಾಪನೆ

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : (301)143
2. ಸದಸ್ಯರ ಹೆಸರು : ಶ್ರೀ ಹ್ಯಾರಿಸ್ ಎನ್.ಎ. (ಶಾಂತಿನಗರ)
3. ಉತ್ತರಿಸುವ ಸಚಿವರು : ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾಸಚಿವರು(ಶ್ರೀ ಮುರುಗೇಶ ಆರ್. ನಿರಾಣಿ)

ಅ. ಬೆಂಗಳೂರು ನಗರ ಮತ್ತು ಗ್ರಾಮಾಂತರ ಜಿಲ್ಲಾ ವ್ಯಾಪ್ತಿಯಲ್ಲಿರುವ ಬೃಹತ್ ಮತ್ತು ಮಧ್ಯಮ ಕೈಗಾರಿಕೆಗಳ ಸಂಖ್ಯೆ ಎಷ್ಟು? ಅವುಗಳಲ್ಲಿರುವ ಉದ್ಯೋಗಿಗಳ ಸಂಖ್ಯೆ ಎಷ್ಟು;

ಬೆಂಗಳೂರು ನಗರ ಜಿಲ್ಲೆಯಲ್ಲಿ ಒಟ್ಟು 750 ಬೃಹತ್ ಮತ್ತು ಮಧ್ಯಮ ಕೈಗಾರಿಕೆಗಳು ಇರುತ್ತವೆ. ಇವುಗಳಿಂದ 283379 ಜನರಿಗೆ ಉದ್ಯೋಗ ಲಭಿಸಿರುತ್ತದೆ. ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಒಟ್ಟು 67 ಬೃಹತ್ ಮತ್ತು ಮಧ್ಯಮ ಕೈಗಾರಿಕೆಗಳು ಇರುತ್ತವೆ. ಇವುಗಳಿಂದ 11384 ಜನರಿಗೆ ಉದ್ಯೋಗ ಲಭಿಸಿರುತ್ತದೆ.

ಆ. ರಾಜ್ಯದಲ್ಲಿ ಕಳೆದ ಎರಡು ವರ್ಷಗಳಲ್ಲಿ ಸ್ಥಾಪಿತಗೊಂಡಿರುವ ಬೃಹತ್ ಮತ್ತು ಮಧ್ಯಮ ಕೈಗಾರಿಕೆಗಳ ಸಂಖ್ಯೆ ಎಷ್ಟು;

ರಾಜ್ಯದಲ್ಲಿ ಕಳೆದ ಎರಡು ವರ್ಷಗಳಲ್ಲಿ ರಾಜ್ಯ ಮಟ್ಟದ ಏಕ ಗವಾಕ್ಷಿ ಸಮಿತಿ ಹಾಗೂ ರಾಜ್ಯ ಉನ್ನತ ಮಟ್ಟದ ಸಮಿತಿಯಲ್ಲಿ ಅನುಮೋದನೆಗೊಂಡ ಯೋಜನೆಗಳಲ್ಲಿ 53 ಯೋಜನೆಗಳು (ಪ್ರತಿ ಯೋಜನೆ ಬಂಡವಾಳ ರೂ.3 ಕೋಟಿ ಮೇಲ್ಪಟ್ಟು) ಸ್ಥಾಪಿತಗೊಂಡಿರುತ್ತವೆ.

ಇ. ರಾಜ್ಯದಲ್ಲಿ ಸ್ಥಾಪಿತಗೊಂಡಿರುವ ಸದರಿ ಕೈಗಾರಿಕೆಗಳಿಗೆ ಸರ್ಕಾರದ ಪ್ರೋತ್ಸಾಹ ಕ್ರಮಗಳೇನು?

2006–11ನೇ ಕೈಗಾರಿಕಾ ರೀತಿಯ ಪ್ರಕಾರ ವಲಯ 1 ಹಾಗೂ ವಲಯ 2 ರಲ್ಲಿ ಸ್ಥಾಪಿತಗೊಳ್ಳುವ ಬೃಹತ್ ಮತ್ತು ಮಧ್ಯಮ ಕೈಗಾರಿಕೆಗಳಿಗೆ ಈ ಕೆಳಕಂಡಂತೆ ಪ್ರೋತ್ಸಾಹ ಹಾಗೂ ಉತ್ತೇಜನಗಳನ್ನು ನೀಡಲಾಗುವುದು.

1. ಸ್ಟಾಂಪ್ ಡ್ಯೂಟಿಯಲ್ಲಿ ವಿನಾಯಿತಿ ಮತ್ತು ನೋಂದಣಿ ಶುಲ್ಕದಲ್ಲಿ ಕಡಿತ
2. ಪರಿವರ್ತನಾ ಶುಲ್ಕದ ಮನ್ನಾ (ಕೈಗಾರಿಕಾ ಬಳಕೆಗಾಗಿ ಪರಿವರ್ತನೆಯಾಗುವ ಭೂಮಿ ಮೇಲೆ)
3. ತ್ಯಾಜ್ಯ ವಸ್ತುಗಳ ಸಂಸ್ಕರಣಾ ಸ್ಥಾವರಗಳ (ಇ.ಟಿ.ಪಿ) ಸ್ಥಾಪನೆಗೆ ಸಹಾಯಧನ
4. ಪ್ರವೇಶ ತೆರಿಗೆ ಮತ್ತು ವಿಶೇಷ ಪ್ರವೇಶ ತೆರಿಗೆಯಲ್ಲಿ ವಿನಾಯಿತಿ
5. ಕೃಷಿ ಉತ್ಪನ್ನಗಳನ್ನು ಸಂಸ್ಕರಿಸುವ ಕೈಗಾರಿಕೆಗಳಿಗೆ ಎ.ಪಿ.ಎಂ.ಸಿ ಸೆಸ್ ನಿಂದ ವಿನಾಯಿತಿ.